**ಚಟುವಟಿಕೆ 1: ನಿಕಟ ವೀಕ್ಷಣೆ**

**ವಸ್ತುಗಳು:**

1. ಎ 4 ಪೇಪರ್
2. ಪೆನ್ಸಿಲ್

**ಚಟುವಟಿಕೆ:**

**ಹಂತ 1**: ಜ್ಞಾಪಕ ಶಕ್ತಿ ಇಂದ ನಿಮ್ಮ ಕುಟುಂಬದ ಸದಸ್ಯರ ಮುಖದ ರೇಖಾಚಿತ್ರವನ್ನು ರಚಿಸಿ.

ನೆನಪಿನಲ್ಲಿಡಬೇಕಾದ ಅಂಶಗಳು:

1. ನಿಮ್ಮ ಕುಟುಂಬದಿಂದ ನೀವು ಯಾರ ಮುಖವನ್ನು ಚಿತ್ರಿಸಲಿದ್ದೀರಿ ಎಂಬುದನ್ನು ಆಯ್ಕೆ ಮಾಡಿಕೊಳ್ಳಿ.
2. ನೀವು ಯಾವ ವ್ಯಕ್ತಿ ಎಂದು ನಿರ್ಧರಿಸಿದ ನಂತರ, ನಿಮಗೆ ಅವರು ಕಾಣಲಾರದ ಸ್ಥಳಕ್ಕೆ ಹೋಗಿ.
3. ನೀವು ಆಯ್ಕೆ ಮಾಡಿದ ವ್ಯಕ್ತಿಯ ಮುಖವನ್ನು ನೋಡದೆ, ನಿಮ್ಮ ಜ್ಞಾಪಕ ಶಕ್ತಿ ಇಂದ ಮಾತ್ರ ಚಿತ್ರಿಸಲು ಪ್ರಾರಂಭಿಸಿ.

**ಹಂತ 2:** ನೀವು ಆಯ್ಕೆ ಮಾಡಿದ ಕುಟುಂಬದ ಅದೇ ಸದಸ್ಯರ ಮುಖದ ರೇಖಾಚಿತ್ರವನ್ನು ನಿಕಟ ವೀಕ್ಷಣೆಯಿಂದ ಚಿತ್ರಿಸುವುದು.

**ನೆನಪಿನಲ್ಲಿಡಬೇಕಾದ ಅಂಶಗಳು:**

1. ಕುಟುಂಬದ ಸದಸ್ಯರ ಮುಖವನ್ನು ಕೆಲವು ನಿಮಿಷಗಳವರೆಗೆ ಗಮನಿಸಿ. ಅವರ ಮುಖದಲ್ಲಿನ ವಿಭಿನ್ನ ಆಕಾರಗಳನ್ನು ಗಮನಿಸಿ. ಉದಾ., ಮುಖವು ಅಂಡಾಕಾರ ಅಥವಾ ದುಂಡಾಗಿರುತ್ತದೆ, ಕಣ್ಣುಗಳು ಎಲೆಯ ಆಕಾರದಲ್ಲಿರುತ್ತವೆ.

2. ಸರಳ ಆಕಾರಗಳನ್ನು ಬಳಸಿಕೊಂಡು ಮುಖದ ಬಾಹ್ಯರೇಖೆಯನ್ನು ಲಘುವಾಗಿ ಚಿತ್ರಿಸುವ ಮೂಲಕ ಪ್ರಾರಂಭಿಸಿ. ನೀವು ಪೂರ್ಣ ಕಾಗದವನ್ನು ಬಳಸಿದ್ದೀರಿ ಎಂದು ಖಚಿತಪಡಿಸಿಕೊಳ್ಳಿ ಮತ್ತು ದೊಡ್ಡದಾಗಿ ಚಿತ್ರಿಸಿ.

3. ಮುಖದ ಎಲ್ಲಾ ಭಾಗಗಳನ್ನು ಗಮನಿಸಿ ಮತ್ತು ಮೂಲ ಆಕಾರಗಳನ್ನು ಬಳಸಿ ಲಘುವಾಗಿ ಚಿತ್ರಿಸಿ (ಸ್ಕೆಚ್ ಮಾಡಿ).

4. ಸರಳ ಆಕಾರಗಳೆಲ್ಲವನ್ನೂ ಚಿತ್ರಿಸಿ (ಸ್ಕೆಚ್ ಮಾಡಿ)ದ ನಂತರ, ನೀವು ಮುಖವನ್ನು ಹೆಚ್ಚು ಸೂಕ್ಷ್ಮವಾಗಿ ಗಮನಿಸಬಹುದು ಮತ್ತು ನೀವು ಗಮನಿಸಿದ ಮೂಲ ಆಕಾರಗಳನ್ನು ಮರುರೂಪಿಸಲು ಪ್ರಾರಂಭಿಸಬಹುದು. ಉದಾ .; ಗಲ್ಲ ಉದ್ದ ಅಥವಾ ಅಗಲ ಇರಬಹುದು.

5. ಮುಖವನ್ನು ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಿ ಮತ್ತು ಎಲ್ಲಾ ಸಣ್ಣ ವಿವರಗಳನ್ನು ಸೇರಿಸಲು ಪ್ರಾರಂಭಿಸಿ. ಉದಾ, ಗುರುತುಗಳು, ಗೆರೆಗಳು, ಆಭರಣಗಳು, ಕೂದಲು ಇತ್ಯಾದಿ.

6. ನೆನಪಿನಲ್ಲಿಡಿ, ರೇಖಾಚಿತ್ರ ಬಿಡಿಸುವಾಗ ನೀವು ವ್ಯಕ್ತಿಯನ್ನು ಆಗಾಗ್ಗೆ ನೋಡುತ್ತಿರಬೇಕು.

ನೀವು ಹಂತ 1 ಮತ್ತು ಹಂತ 2ರ ರೇಖಾಚಿತ್ರ ಮುಗಿದ ನಂತರ, 2 ರೇಖಾಚಿತ್ರಗಳನ್ನು ನಿಮ್ಮ ಕುಟುಂಬದೊಂದಿಗೆ ಹೋಲಿಕೆ ಮಾಡಿ ಮತ್ತು ಎರಡನೇ ರೇಖಾಚಿತ್ರದಲ್ಲಿ ನೀವು ಎಷ್ಟು ಹೆಚ್ಚು ವಿವರಗಳನ್ನು ಸೆರೆಹಿಡಿದಿದ್ದೀರಿ ಎಂದು ನೋಡಿ. ಹೆಚ್ಚು ನಿಕಟ ವೀಕ್ಷಣೆ ನಮಗೆ ಹೆಚ್ಚಿನದನ್ನು ನೋಡಲು ಮತ್ತು ಹೆಚ್ಚಿನ ವಿವರಗಳನ್ನು ಸಂಗ್ರಹಿಸಲು ಹೇಗೆ ಸಹಾಯಮಾಡುತ್ತದೆ ಎಂಬುದನ್ನು ಗಮನಿಸಿ.

ಉದಾಹರಣೆಯ ಚಿತ್ರಗಳು:

**ಹಂತ 1**



**ಹಂತ 2**

